AUGUST 08, 2025

# AKASHAVANI - DHARWAD

# PRADESH SAMACHARA (KANNADA) 12 PM

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಕೃಷ್ಣ ಮೇಲ್ದಂಡೆ 2ನೇ ಹಂತದ ಯೋಜನೆ ಅಡಿ, ವಿಜಯಪುರ ಜಿಲ್ಲೆ, ನಿಡಗುಂದಿ ತಾಲೂಕು, ಆಲಮಟ್ಟಿಯ ಶ್ರೀ ಲಾಲ ಬಹಾದ್ದೂರ್ ಶಾಸ್ತ್ರಿ ಅಣೆಕಟ್ಟೆಯ ಎತ್ತರವನ್ನು, ಕೃಷ್ಣ ನ್ಯಾಯಾಧೀಕರಣದ ಆದೇಶದಂತೆ, 519 ಮೀಟರ್ ನಿಂದ 524 ಮೀಟರ್‌ಗೆ ಹೆಚ್ಚಿಸುವುದು, ಕರ್ನಾಟಕದ ಹಕ್ಕು ಎಂದು, ರಾಜ್ಯದ ಬಿಜೆಪಿ ಸಂಸದರ ನಿಯೋಗ, ಕೇಂದ್ರ ಜಲ ಶಕ್ತಿ ಖಾತೆ ಸಚಿವ, ಸಿ.ಆರ್. ಪಾಟೀಲ ಅವರಿಗೆ, ಮನವರಿಕೆ ಮಾಡಿದೆ. ಹೊಸ ದಿಲ್ಲಿಯಲ್ಲಿ, ಹಾವೇರಿ ಸಂಸದ ಬಸವರಾಜ ಬೊಮ್ಮಾಯಿ, ಈ ವಿಷಯ ತಿಳಿಸಿದರು. ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ರಾಜ್ಯ ಜಲ ಶಕ್ತಿ ಖಾತೆ ಸಚಿವ ವಿ.ಸೋಮಣ್ಣ, ಸಂಸದರಾದ ಗೋವಿಂದ ಕಾರಜೋಳ, ಪಿ.ಸಿ. ಗದ್ದಿಗೌಡರ ಹಾಗೂ ರಮೇಶ ಜಿಗಜಿಣಗಿ, ನಿಯೋಗದಲ್ಲಿದ್ದರು.**

<><><>

**ಪ್ರಧಾನಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ, ನಿಯಮಬದ್ಧ ಗೊಳಿಸುವಿಕೆ ಯೋಜನೆ ಅಡಿ, ದಾವಣಗೆರೆ ಜಿಲ್ಲೆಯಲ್ಲಿ, ಇನ್ನೂರು ಜನರಿಗೆ, 16 ಕೋಟಿ 52 ಲಕ್ಷ ರೂಪಾಯಿ, ಸಾಲ ಮಂಜೂರಾಗಿದೆ ಎಂದು, ಜಿಲ್ಲಾ ಪಂಚಾಯಿತಿ ಸಿ.ಇ.ಓ. ಗಿತ್ತೆ ಮಾಧವ ವಿಠಲರಾವ್ ತಿಳಿಸಿದ್ದಾರೆ. 'ಆತ್ಮ ನಿರ್ಭರ ಭಾರತ ಅಭಿಯಾನ'ದಡಿ, ಪ್ರಧಾನಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆ ಯೋಜನೆ, ಜನ ಜಾಗ್ರತಿ ಕಾರ್ಯಕ್ರಮ ಉದ್ಘಾಟಿಸಿ, ಅವರು ಮಾತನಾಡಿದರು. ಹೊನ್ನಾಳಿ ತಾಲೂಕು, ಕೂಲಂಬಿ ಗ್ರಾಮದ, ಯುವ ರೈತರೊಬ್ಬರು, ಪ್ರಧಾನಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆ ಯೋಜನೆಯಡಿ, ಸಿರಿಧಾನ್ಯದಿಂದ ತಯಾರಿಸಿದ ಉತ್ಪನ್ನವನ್ನು ದೇಶ ವಿದೇಶಗಳಿಗೆ ರಫ್ತು ಮಾಡುತ್ತಿದ್ದು, ವಿಮಾನಗಳಲ್ಲಿ ಪ್ರಯಾಣಿಕರಿಗೆ ಮಿಲೆಟ್ ಬಿಸ್ಕೆಟ್‌ನ್ನು ಬಳಸಲು ಅವಕಾಶ ದೊರಕಿದೆ, ಎಂದರು.**

<><><>

**ಕೇಂದ್ರ ಪುರಸ್ಕೃತ, ಆರ್ಥಿಕ ಹಾಗೂ ಸಾಮಾಜಿಕ ಭದ್ರತಾ ಯೋಜನೆಗಳ ಕುರಿತು, ಜನಸಾಮಾನ್ಯರಿಗೆ ತಿಳಿವಳಿಕೆ ಮೂಡಿಸುವ, ಜನ ಜಾಗೃತಿ ಕಾರ್ಯಕ್ರಮ, ಹಾವೇರಿ ತಾಲೂಕು, ಕಬ್ಬೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಜರುಗಿತು. ಜನ ಜಾಗೃತಿ ಕಾರ್ಯಕ್ರಮದಲ್ಲಿ, ಪಾಲ್ಗೊಂಡ ಗ್ರಾಮದ ನಿವಾಸಿ ಕಲಾವತಿ ಕಮ್ಮಾರ ಅವರು ಬಿಮಾ ಯೋಜನೆಗಳ ಕುರಿತು ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.**

<><><>

ಕಲಾವತಿ ಕಮ್ಮಾರ 32 ಸೆಕೆಂದುಗಳು

<><><>

ಇಂದು ವರಮಹಾಲಕ್ಷ್ಮೀ ಹಬ್ಬದ ಹಿನ್ನೆಲೆ, ನಾಡಿನಾದ್ಯಂತ ಸಂಭ್ರಮದ ವಾತಾವರಣ ಮನೆ ಮಾಡಿದೆ. ಕೋಲಾರ ಜಿಲ್ಲೆಯಾದ್ಯಂತ ಮಹಿಳೆಯರು ತಂತಮ್ಮ ಮನೆಗಳನ್ನು ತಳಿರು ತೋರಣಗಳಿಂದ ಸಿಂಗರಿಸಿ, ಲಕ್ಷ್ಮೀದೇವಿಗೆ ಪೂಜೆ ಸಲ್ಲಿಸಿದರು. ಹಾಸನ ಜಿಲ್ಲೆಯಲ್ಲಿ ವರ ಮಹಾಲಕ್ಷ್ಮೀ ಹಬ್ಬದ ಆಚರಣೆ ಸಂಭ್ರಮ, ಸಗಡರದೊಂದಿಗೆ ಜರುಗುತ್ತಿದೆ. ಚಿಕ್ಕಮಗಳೂರು ಜಿಲ್ಲೆಯಾದ್ಯಂತ ವರ ಮಹಾಲಕ್ಷ್ಮೀ ಹಬ್ಬದ ಅಂಗವಾಗಿ ಇಂದು ಬೆಳಗ್ಗೆ ಜನರು ಮಾರುಕಟ್ಟೆಗಳಲ್ಲಿ ಹೂ, ಹಣ್ಣು ಖರೀದಿಸಿ, ಮನೆ ಹಾಗೂ ಶ್ರದ್ಧಾಕೇಂದ್ರಗಳಲ್ಲಿ ಪೂಜೆ ಸಲ್ಲಿಸಿದರು. ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರದ, ಶ್ರೀ ಲಕ್ಷ್ಮೀ ದೇವಾಲಯದಲ್ಲಿ, ಹಬ್ಬದ ಅಂಗವಾಗಿ ದೇವಿಗೆ ವಿಶೇಷ ಅಲಂಕಾರ, ಪೂಜೆ ಹಾಗೂ ಸೇವೆಗಳು ನೆರವೇರಿದವು.

<><><>

ರಾಯಚೂರು ಜಿಲ್ಲೆಯ, 11 ಕಾಟನ್ ಜಿನ್ನಿಂಗ್ ಆ್ಯಂಡ್ ಪ್ರೆಸ್ಸಿಂಗ್ ಘಟಕಗಳಿಗೆ, 2020–25ರ ಕೈಗಾರಿಕಾ ನೀತಿ ಅಡಿ, ಸಹಾಯ ಧನ, ಶೀಘ್ರ ಬಿಡುಗಡೆ ಮಾಡುವಂತೆ, ಸಣ್ಣ ಕೈಗಾರಿಕೆಗಳ ಖಾತೆ ಸಚಿವ, ಶರಣಬಸಪ್ಪ ದರ್ಶನಾಪುರ ಅವರಿಗೆ, ರಾಯಚೂರು ಕಾಟನ್ ಮಿಲ್ಲರ್ ಅಸೋಸಿಯೇ ’ನ್ ಅಧ್ಯಕ್ಷರಾದ ಲಕ್ಷ್ಮೀ ರೆಡ್ಡಿ ನೇತೃತ್ವದ ನಿಯೋಗ, ಮನವಿ ಸಲ್ಲಿಸಿದೆ.

<><><>

ಉತ್ತರ ಕರ್ನಾಟಕ ಹಾಗೂ ರಾಜ್ಯ ರಾಜಧಾನಿ ಬೆಂಗಳೂರು ಮಧ್ಯೆ ಸಂಪರ್ಕವನ್ನು ಹೆಚ್ಚಿಸುವ ನಿಟ್ಟಿನಲ್ಲಿ, ನೈಋತ್ಯ ರೇಲ್ವೆಯು, ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೇಲ್ವೆ ನಿಲ್ದಾಣ ಹಾಗೂ ಬೆಳಗಾವಿ ನಡುವೆ, ನೂತನ ವಂದೇ ಭಾರತ ರೈಲು ಸೇವೆಗಳನ್ನು ಆರಂಭಿಸುತ್ತಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, 10 ನೇ ತಾರೀಖಿನಂದು, ಬೆಂಗಳೂರಿನಲ್ಲಿ, ನೂತನ ರೈಲು ಸೇವೆಗೆ ಹಸಿರು ನಿಶಾನೆ ತೋರಿ, ಉದ್ಘಾಟಿಸಲಿದ್ದಾರೆ. ಈ ರೈಲು ಬುಧವಾರ ಹೊರತುಪಡಿಸಿ, ವಾರದ ಆರು ದಿನಗಳ ಕಾಲ ಸಂಚರಿಸಲಿದೆ.

<><><>

ದೇಶದಲ್ಲೇ ಅತ್ಯಂತ ಸುರಕ್ಷಿತ ನಗರಗಳ ಪಟ್ಟಿಯಲ್ಲಿ, ಮಂಗಳೂರು ನಗರಕ್ಕೆ ಮೊದಲ ಸ್ಥಾನ ಹಾಗೂ ಜಾಗತಿಕವಾಗಿ 49ನೇ ಸ್ಥಾನ ಸಿಕ್ಕಿರುವುದು, ಸಂತೋ ’ ಹಾಗೂ ಹೆಮ್ಮೆಯ ಸಂಗತಿಯಾಗಿದೆ ಎಂದು ದಕ್ಷಿಣ ಕನ್ನಡ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಹೇಳಿದ್ದಾರೆ. ವಿಶ್ವದ ದೊಡ್ಡ ಡೇಟಾ ಸಂಗ್ರಹ ಸಂಸ್ಥೆ ನಂಬಿಯೋ, ಭಾರತದ ಟಾಪ್–10 ಸುರಕ್ಷಿತ ನಗರಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ.

<><><>

ಕರ್ನಾಟಕ ಕೊಡವ ಸಾಹಿತ್ಯ ಅಕಾದೆಮಿ ಆಯೋಜಿಸಿದ್ದ, ಕೊಡವ ಸಂಸ್ಕೃತಿ ಬಿಂಬಿಸುವ, 'ಐಪಣಿರ ಆಯಿಮೆ; ಕಳಿ ಪೈಪೋಟಿ' ಕಾರ್ಯಕ್ರಮಕ್ಕೆ, ಕೊಡಗು ಜಿಲ್ಲೆ, ನಾಪೋಕ್ಲುವಿನಲ್ಲಿ, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಹಾಗೂ ಶಾಸಕ ಎ.ಎಸ್.ಪೊನ್ನಣ್ಣ ಚಾಲನೆ ನೀಡಿದರು. ಅಕಾದೆಮಿ ಅಧ್ಯಕ್ಷ ಅಜ್ಜಿನಿಕಂಡ ಸಿ.ಮಹೇಶ್ ನಾಚಯ್ಯ ಪಾಲ್ಗೊಂಡಿದ್ದರು.

<><><>

ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವಾಲಯ ಸಂಚಾಲಿತ, ಧರ್ತಿ ಆಬಾ ಜನ ಜಾತೀಯ ಗ್ರಾಮ ಉತ್ಕರ್ಷ ಅಭಿಯಾನದಡಿ, ಉತ್ತರಕನ್ನಡ ಜಿಲ್ಲೆಯ, ಹಳಿಯಾಳ, ಜೋಯಿಡಾ, ಮುಂಡಗೋಡ ಹಾಗೂ ಭಟ್ಕಳ ತಾಲೂಕಿನ, 31 ವನವಾಸಿ ಗ್ರಾಮಗಳು ಆಯ್ಕೆಯಾಗಿವೆ. ಯೋಜನೆ ಕುರಿತು, ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ, ಕಾರವಾರದ ಕ್ರಿಮ್ಸ್ ಸಭಾ ಭವನದಲ್ಲಿ, ಕಾರ್ಯಾಗಾರ ಜರುಗಿತು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ

<><><>